# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1746 |
| ಸದಸ್ಯರ ಹೆಸರು | : | ಶ್ರೀ ಕೆ.ವಿ.ನಾರಾಯಣಸ್ವಾಮಿ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 14.03.2022 |
| ಉತ್ತರಿಸುವವರು | : | ಅರಣ್ಯ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಸಾಮಾಜಿಕ ಅರಣ್ಯ ಹೆಚ್ಚಿಸಲು ಸರ್ಕಾರ ಕೈಗೊಂಡಿರುವ ಕಾರಣಗಳೇನು; | ರಾಷ್ಟ್ರದ ಅರಣ್ಯ ನೀತಿಯಂತೆ ಭೌಗೋಳಿಕ ಪ್ರದೇಶಕ್ಕೆ ಅನುಗುಣವಾಗಿ ಶೇಕಡಾ 33ರಷ್ಟು ಕನಿಷ್ಠ ಅರಣ್ಯ ಹೊದಿಕೆ ಇರಬೇಕೆಂದು ನೀತಿ ಇರುತ್ತದೆ. ಇದರಿಂದ ಪರಿಸರ ಮತ್ತು ಜೀವಿ ಪರಿಸ್ಥಿತಿಗೆ ಬಹಳಷ್ಟು ಪ್ರಯೋಜನವಿದ್ದು, ಮನುಕುಲ, ಪ್ರಾಣಿ ಸಂಕುಲಕ್ಕೆ ಉತ್ತಮ ಪರಿಸರದ ವಾತಾವರಣ ಕಲ್ಪಿಸುವುದು ಮುಖ್ಯ ಧ್ಯೇಯವಾಗಿರುತ್ತದೆ. ಆದರೆ, ಕರ್ನಾಟಕ ರಾಜ್ಯದಲ್ಲಿ ಶೇಕಡಾ 22ರಷ್ಟು ಮಾತ್ರ ಅರಣ್ಯ ಪ್ರದೇಶವಿದ್ದು, ಕೊರತೆಯಾಗಿರುವ ಶೇಕಡಾ 11ರಷ್ಟು ಹೆಚ್ಚಿಸಬೇಕಾಗಿರುವ ಗುರಿ ಇರುತ್ತದೆ.<br><br>ವಸ್ತು-ಸ್ಥಿತಿಯಂತೆ ಅರಣ್ಯ ಪ್ರದೇಶಗಳ ವ್ಯಾಪ್ತಿಯನ್ನು ಹೆಚ್ಚಿಸಲು ಈಗಿನ ಸಂದರ್ಭಗಳಲ್ಲಿ ಬಹಳಷ್ಟು ಕಾನೂನು ಹಾಗೂ ಸಮುದಾಯದವರ ನಿರ್ಬಂಧಗಳು ಇರುವುದರಿಂದ ಕಷ್ಟ ಸಾಧ್ಯವಾಗಿರುತ್ತದೆ.<br><br>ಇದನ್ನು ಮನಗಂಡ ಸರ್ಕಾರ ಸಾಮಾಜಿಕ ಅರಣ್ಯ ಹೆಚ್ಚಿಸಲು ಅರಣ್ಯೇತರ ಪ್ರದೇಶಗಳಾದ ಇತರೇ ಸರ್ಕಾರಿ ಪ್ರದೇಶಗಳು ಅಂದರೆ, ಸಿ- ಮತ್ತು ಡಿ-ದರ್ಜೆಯ ಜಮೀನುಗಳು, ಕಾವಲುಗಳು, ಗುಡ್ಡಗಳು, ರಸ್ತೆಬದಿ, ಕೆರೆ ಅಂಗಳ ಹಾಗೂ ಹೆಚ್ಚಾಗಿ ಒಡೆತನದಲ್ಲಿರುವ ರೈತರುಗಳ ಖಾಸಗೀ ಜಮೀನುಗಳಲ್ಲಿ ಹೆಚ್ಚು ಜನೋಪಯೋಗಿ ಗಿಡ-ಮರಗಳನ್ನು ಬೆಳೆಸಿ, ಹಸಿರು ಹೊದಿಕೆಯನ್ನು ಹೆಚ್ಚಿಸುವಲ್ಲಿ ಸಾಮಾಜಿಕ ಅರಣ್ಯ ಕಾರ್ಯಕ್ರಮಗಳನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವಿವಿಧ ಯೋಜನೆಗಳ ಅನುದಾನದಡಿಯಲ್ಲಿ ವಾರ್ಷಿಕವಾಗಿ ಅನುದಾನದ ಲಭ್ಯತೆ ಅನುಗುಣವಾಗಿ ಸಾರ್ವಜನಿಕರ/ ರೈತರುಗಳ ಸಹಕಾರದಿಂದ ಸಾಧಿಸಲಾಗುತ್ತಿದೆ. |
| ಆ) | ಸಾಮಾಜಿಕ ಅರಣ್ಯೀಕರಣ ಯೋಜನೆಯಡಿಯಲ್ಲಿ ಸರ್ಕಾರ ಯಾವ ಪ್ರಬೇದದ ಗಿಡಗಳನ್ನು ವಿತರಿಸುತ್ತಿದೆ; ಸದರಿ ಗಿಡಗಳಿಗೆ ವಿಧಿಸುತ್ತಿರುವ ಶುಲ್ಕವೆಷ್ಟು; | ಸಾಮಾಜಿಕ ಅರಣ್ಯ ಯೋಜನೆಯಡಿಯಲ್ಲಿ ಜನೋಪಯೋಗಿ, ಸ್ಥಳೀಯ ತಳಿಗಳ ಗಿಡಗಳನ್ನು ಹೆಚ್ಚಿನ ಪ್ರಮಾಣದಲ್ಲಿ ರೈತರಿಗೆ ನೀಡಲು ಮತ್ತು ನೆಡುತೋಪುಗಳನ್ನು ಬೆಳೆಸಲು ಉಪಯೋಗಿಸುತ್ತಿದ್ದು, |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | ಹೆಚ್ಚಾಗಿ ರೈತರುಗಳ ಬೇಡಿಕೆಗಳಂತೆ ಅಂದರೆ, ಹೊಂಗೆ, ಸಾಗುವಾನಿ, ರಕ್ತ ಚಂದನ, ಶ್ರೀಗಂಧ, ನೇರಳೆ, ಬೆಟ್ಟ ನೆಲ್ಲಿ, ಬೇಲ, ಬಿದಿರು, ಬಿಲ್ವಪತ್ರೆ, ಶಿವನಿ, ಹೆಬ್ಬೇವು, ಕಹಿಬೇವು, ಕರಿಬೇವು, ನುಗ್ಗೆ, ಮತ್ತಿ, ಹೊನ್ನೆ, ಹುಣಸೆ, ಅರಳಿ, ಆಲ, ಗೋಣಿ, ಬಸರಿ, ಅಂಟುವಾಳ, ಹೂವರಸಿ, ಕಿರುನೆಲ್ಲಿ, ನಂದಿ, ವಾಟೆಹುಳಿ, ಮುಂತಾದ ಜಾತಿಗಳ ಸಸಿಗಳನ್ನು ಸಸ್ಯಕ್ಷೇತ್ರಗಳಲ್ಲಿ ಬೆಳೆಸಿ, ಉಪಯೋಗಿಸಲಾಗುತ್ತಿದೆ.<br><br>ರೈತಪರ ಯೋಜನೆಗಳಾದ ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆ, ಉಪ-ಅಭಿಯಾನ ಕೃಷಿ ಅರಣ್ಯ ಯೋಜನೆ, ಬಿದಿರು ಮಿಷನ್, RSPD ಮುಂತಾದ ಯೋಜನೆಗಳಡಿ ರೈತರಿಗೆ ರಿಯಾಯಿತಿ ದರಗಳಲ್ಲಿ ಸಸಿಗಳನ್ನು ಮಾರಾಟ ಮಾಡಲಾಗುತ್ತಿದ್ದು, 5"x8" / 6"x9" ಗಿಡ ಒಂದಕ್ಕೆ ರೂ.1/-, 8"x12" ಗಿಡ ಒಂದಕ್ಕೆ ರೂ.3/- ಹಾಗೂ 10"x16" ಗಿಡ ಒಂದಕ್ಕೆ ರೂ.5/- ದರದಂತೆ ರೈತರಿಗೆ ರಿಯಾಯಿತಿ ದರದಲ್ಲಿ ನೀಡಲಾಗುತ್ತಿದೆ. |
| ಇ) | 2019-2020ನೇ ಸಾಲಿನಲ್ಲಿ ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯಲ್ಲಿ ವಿತರಣೆಯಾದ ಗಿಡಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು) | 2019-2020ನೇ ಸಾಲಿನಲ್ಲಿ ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯಲ್ಲಿ ವಿತರಣೆಯಾದ ಗಿಡಗಳ ಸಂಖ್ಯೆಯ ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ. |
| | ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯಲ್ಲಿ ಸಾರ್ವನಿಕರು/ ರೈತರಿಗೆ 2018-2019 ರಿಂದ ಇಲ್ಲಿಯವರೆಗೂ ನೀಡಿದ ಪ್ರೋತ್ಸಾಹ ಧನವೆಷ್ಟು? (ವರ್ಷವಾರು ಮಾಹಿತಿ ನೀಡುವುದು) | ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯಲ್ಲಿ 2018-19ನೇ ಸಾಲಿನಿಂದ ಇಲ್ಲಿಯವರೆಗೆ ನೀಡಿರುವ ಪ್ರೋತ್ಸಾಹ ಧನದ ವಿವರ ಈ ಕೆಳಕಂಡಂತಿದೆ:- |

| ವರ್ಷ | ಪಾವತಿಸಿರುವ ಪ್ರೋತ್ಸಾಹ ಧನ (ರೂ.ಲಕ್ಷಗಳಲ್ಲಿ) |
|---|---|
| 2018-19 | 1486.00 |
| 2019-20 | 1677.00 |
| 2020-21 | 1569.00 |
| 2021-22 | 1000.00 |

ಸಂಖ್ಯೆ: ಅಪಜೀ 26 ಎಫ್ ಟಿಎಸ್ 2022

(ಉಮೇಶ್ ವಿ. ಕತ್ತಿ)
ಅರಣ್ಯ, ಆಹಾರ, ನಾಗರಿಕ ಸರಬರಾಜು
ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು

ಅನುಬಂಧ

ಶ್ರೀ ಕೆ.ವಿ. ನಾರಾಯಣಸ್ವಾಮಿ (ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1523 (1746)ರ (ಇ)ಗೆ ಸಂಬಂಧಿಸಿದಂತೆ ಉತ್ತರ.

| ಕ್ರ ಸಂ | ಜಿಲ್ಲೆ | ವಿತರಿಸಿದ ಸಸಿಗಳ ಸಂಖ್ಯೆ |
|---|---|---|
| 1 | ಬೆಂಗಳೂರು ನಗರ | 7,530 |
| 2 | ಬೆಂಗಳೂರು ಗ್ರಾಮಾಂತರ | 43,232 |
| 3 | ರಾಮನಗರ | 10,459 |
| 4 | ಕೋಲಾರ | 63,987 |
| 5 | ಚಿಕ್ಕಬಳ್ಳಾಪುರ | 94,340 |
| 6 | ಬಳ್ಳಾರಿ | 84,700 |
| 7 | ಕೊಪ್ಪಳ | 4,647 |
| 8 | ಚಿತ್ರದುರ್ಗ | 71,645 |
| 9 | ದಾವಣಗೆರೆ | 1,54,556 |
| 10 | ಬೆಳಗಾವಿ | 78,395 |
| 11 | ಗೋಕಾಕ್ | 90,324 |
| 12 | ಬಾಗಲಕೋಟೆ | 82,784 |
| 13 | ವಿಜಯಪುರ | 1,67,529 |
| 14 | ಚಾಮರಾಜನಗರ | 69,329 |
| 15 | ಚಿಕ್ಕಮಗಳೂರು | 16,34,255 |
| 16 | ಧಾರವಾಡ | 50,125 |
| 17 | ಹಾವೇರಿ | 1,89,525 |
| 18 | ಗದಗ | 9,345 |
| 19 | ಕಲಬುರಗಿ | 94,829 |
| 20 | ಬೀದರ್ | 76,107 |
| 21 | ರಾಯಚೂರು | 46,035 |
| 22 | ಯಾದಗಿರಿ | 82,816 |
| 23 | ಹಾಸನ | 10,15,828 |
| 24 | ತುಮಕೂರು | 3,68,555 |
| 25 | ಉತ್ತರ ಕನ್ನಡ | 40,138 |
| 26 | ಮೈಸೂರು | 12,90,245 |
| 27 | ಮಂಡ್ಯ | 3,33,457 |
| 28 | ದಕ್ಷಿಣ ಕನ್ನಡ | 48 |
| 29 | ಉಡುಪಿ | 78 |
| 30 | ಶಿವಮೊಗ್ಗ | 1,84,000 |

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ,
(ಅಭಿವೃದ್ಧಿ), ಬೆಂಗಳೂರು.